ಹುಡುಗನ ಧ್ವನಿಯಲ್ಲಿ ನನ್ನ ತಪ್ಪು ಗ್ರಹಿಕೆಯನ್ನು ಹೋಗಲಾಡಿಸುವ ಆತುರತೆಯಿತ್ತು. ಮಾದೇವಿ ಹುಡುಗನತ್ತ ತಿರುಗಿ, "ಏಯ್ ಬುಡೋ ಮಗಾ. ನೀ ನಂಗೆ ಸ್ವಂತ ಅಲ್ಲ ಅಂದೋರ್‍ಯಾರು?" ಎಂದು ಗದರಿದವಳು ಮತ್ತೆ ಅವಳತ್ತ ತಿರುಗಿ,

"ಈ ಹುಡುಗ ಎಂಟ್ನೇ ಕ್ಲಾಸ್ ಓದ್ತಿದ್ದ. ಸ್ಕೂಲಿಗೋಗೊ ಮುಂಚೆ ಪೇಪರ್ ಹಾಕ್ತಿದ್ದ. ಒಂದಿನ ಒಂದಷ್ಟು ಹಳೇ ಕಾಗ್ದ ತಂದ್ಕೊಟ್ಟು ಇದ್ನ ತಗಂಡು ಒಂದ್‌ಪ್ಲೇಟು ಬಜ್ಜಿ ಕೊಡ್ತೀಯ ಅಜ್ಜಿ ಅಂತ ಕೇಳ್ದ. ಅವತ್ತಿಂದ ಸಂಜೆ ಮಮ್ಮಗನಂಗೇ ನಂಜೊತೆ ಬಜಿ ಮಾಡಾಕ ಸೇರ್ತಿದ್ದ. ಈಗ ಇವ್ನಿಗೆ ಮನಿಕ್ಕಳಾಕೆ ಜಾಗ ಇಲ್ದಂಗಾಯ್ತು."

"ಮೊಮ್ಮಗನಂಗೇ ಅಂತಿ. ನಿನ್ಮನೇಲೆ ಇಟ್ಕೊ." ಅಜ್ಜಿಯ ನಾಟಕದ ಮಾತಿಗೆ ಸರಿಯಾಗಿಯೇ ತಿವಿಯಬೇಕೆನಿಸಿದ್ದರಿಂದ ಚುಚ್ಚಿ ಹೇಳಿದ್ದಳವಳು.

"ನಮ್ಮ ಶೆಡ್ಡಲ್ಲಿ ಮೂರ್ಜನ ಇದ್ದೀವಿ ಮೇಡಮ್ನೋರೆ. ಮೂರೂ ಜನ ಸೇರ್ಕಂಡು ಆ ಶೆಡ್ಡಿಗೆ ಬಾಡಿಗೆ ಕಟ್ತೀವಿ. ಈ ಹುಡುಗನ್ನ ಒಳಿಕ್ಕೆ ಬಿಟ್ಕಳಕೆ ಅವರಿಬ್ರುದು ಒಪ್ಗೆ ಇಲ್ಲ. ಶೆಡ್ ಮುಂದೆ ನನ್ನ ಗಾಡಿ ಇಟ್ಟಿರ್ತೇನಲ್ಲ. ಅದ್ಕೇ ಗೋಣಿತಾಟು ಕಟ್ಟಿ ಈ ಮಗನ್ನ ಮಲಿಕ್ಕಳಕ್ಕೆ ಹೇಳ್ದೆ." ಮಾದೇವಿ ಮಾತಿಂದ ನಾಚಿಕೆಯಾಗಿ ಹುಡುಗನನ್ನು ಕರೆದುಕೊಂಡು ಆಶ್ರಮಕ್ಕೆ ಬರುವಂತೆ ಹೇಳಿದಳು. ಮಾದೇವಿಯ ಮುಖ ಮತ್ತಷ್ಟು ಅಗಲವಾಯ್ತು.

"ಆಗ್ಲವ್ವಾ. ಮಗಂಗೆ ದಿಕ್ಕು ತೋರ್ಸಿ ಪುಣ್ಯ ಕಟ್ಕೊ. ಸ್ಕೂಲಿಗೋಗಿ ವಿದ್ಯಾ ಕಲಿಯೋ ಆಸೆ." ಅನ್ನುತ್ತ ಹುಡುಗನ ತಲೆ ಸವರಿದಳು.

"ಹುಡುಗನನ್ನ ಆಶ್ರಮಕ್ಕೆ ಸೇರಿಸಿಕೊಳ್ಬೇಕಾದ್ರೆ ಕೆಲವು ದಾಖಲೆಗಳನ್ನ ರೆಡಿ ಮಾಡ್ಬೇಕು ಅಜ್ಜಿ. ಈ ಹುಡುಗನ ಅಪ್ಪ ಜೈಲಲ್ಲಿದ್ದಾನೆ ಅಂತಿ. ಅವನನ್ನೂ ಮಾತಾಡಿಸ್ಬೇಕು. ಎಲ್ಲದಕ್ಕೂ ನೀನು ಓಡಾಡ್ಬೇಕು. ನೀನೂ ಸಹಿ ಹಾಕ್ಬೇಕು. ನೀನೇ ಜವಾಬ್ದಾರಿ ಆಗ್ತಿ'' ಅಂದಳು. ಮೇಡಮ್ಮು ದಾಖಲೆ ಅಂದಾಗ ಇತ್ತೀಚೆಗೆ ಗವರ್ಮೆಂಟೋರು ಇಲ್ಲೇ ಹುಟ್ಟಿದ್ದಕ್ಕೆ ಕಾಗ್ದ ಪತ್ರ ಕೇಳ್ತಿದ್ದಾರಂತೆ ಎಂದು ಕೇಳಿದ್ದು ನೆನಪಾಗಿ ಗಾಬರಿಯಾದಳು.

"ಮೇಡಮ್ನೋರೆ, ನಾ ಒಬ್ಳು ತಿರ್ಬೋಕಿ. ನಾ ಹುಟ್ಟಿದ್ದಕ್ಕೆ ಎಲ್ಲಿಂದ ಕಾಗ್ದ ಪತ್ರ ತಗಂಡ್ಬರ್ಲಿ?..." ಆತಂಕದಿಂದ ಕೇಳಿದಳು.

"ಅಯ್ಯೋ... ನಿನ್ನ ದಾಖಲೆ ಪತ್ರ ನಮಗ್ಯಾಕೆ. ಆ ಹುಡುಗ ಮೊದಲು ಹೋಗ್ತಿದ್ದ ಶಾಲೆಯಿಂದ ಕೆಲವು ಕಾಗ್ದ–ಪತ್ರ ಬೇಕು ಅಂದೆ" ಮೇಡಮ್ಮು ಪ್ರೀತಿಯಿಂದ ಹೇಳಿದಾಗ ಗೆಲುವಾದಳು.

"ಓ ಅಂಗಾ... ನಮ್ಮುಡಗಂಗೆ ಮಲ್ಕಳಾಕ ಓದಾಕ ಜಾಗ ಕೊಡಿ ಸಾಕು ಮೇಡಮ್ಮು. ಸಾಲಿ ಫೀಸು ನಾನೇ ಕೊಡ್ತೀನಿ." ಮೇಡಮ್ಮು ಅವಳ ಹೂವಿನ ಗಾಡಿಯನ್ನೊಮ್ಮೆ ಅವಳ ಮುಖವನ್ನೊಮ್ಮೆ ನೋಡಿದಳು. ಮಾದೇವಿಗೆ ನಗು ಬಂತು.

"ಬೆಳಗಿನ ಹೊತ್ತು ಇಲ್ಲಿ ಹೂವ ಮಾರ್ತೀನಿ. ಸಂಜೆ ಮುಂದೆ ಬಜಿ ಮಾಡ್ತೀನಿ. ಯಾ ಪಾಟಿ ತಿಂತಾರೆ ಜನ. ಮಸ್ತ್ ಯಾಪಾರ. ನಿಮ್ಮ ಆಶ್ರಮದ ಫುಟ್ಬಾತ್ ಮೇಲೆ ಅಷ್ಟು ಯಾಪಾರ ಇರ್ಲಿಲ್ಲ ಮೇಡಮ್ಮು." ಬೆಪ್ಪಾಗಿ ಅರೆಕ್ಷಣ ಮಾದೇವಿಯನ್ನೇ ದಿಟ್ಟಿಸಿ, ಹುಡುಗನ್ನ ಆಮೇಲೆ ಕರ್ಕೊಂಡ್ಬಾ ಎಂದಂದು ಮುನ್ನಡೆದಳು. ಮಾದೇವಿ ದೇವಸ್ಥಾನದ ಬೀದಿಗೆ ತಿರುಗಿದ ಗುಂಪಿನತ್ತ ನೋಡುತ್ತ ಕೊರಳೆತ್ತಿ ಹೊಕ್ಕುಳ ಬುಡದಿಂದ ಧ್ವನಿ ಎಬ್ಬಿಸಿ ಮೊಲ್ಲೇ ಹೂವ... ಮೊಲ್ಲೆ ಹೂವ... ಎಂದು ಕೂಗುತ್ತ ಅತ್ತ ಓಡಿದಳು. ಹೂವಿನ ಬುಟ್ಟಿ ಎದುರು ನಿಂತು ಮತ್ತೆ ಮಹಾದ್ವಾರದತ್ತ ನೋಡಿ ಕೂಗಲೆಂದು ಕೊರಳೆತ್ತಿದಾಗ ರಂಗೋಲಿ ಹುಡಿ ಮಾರುವ ವೇಂಡಮಣಿ ಇವಳತ್ತಲೇ ಬಂದಳು. ತಾನು ತಂದ ಸುದ್ದಿ ಬಿತ್ತರಿಸುವ ಆತುರದಿಂದ ತಲೆ ಮೇಲೆ ಡಬ್ಬ ಇದ್ದಂತೆಯೇ ಮಾತಿಗೆ ತೊಡಗಿದ್ದಳು.